**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop**

ಐ.ಎಫ್.ಟಿ. ಸಂಖ್ಯೆ/ಶಿ.ದಾ.ಚಿ.ಸಹಾಒ/ಮಾರುಕಟ್ಟೆ/ಟೆಂಡರ್–1/3755 /2016–17 **ದಿನಾಂಕ: 17.08.2016**

**–: *ಸಾರಿಗೆ ವಾಹನಗಳನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು* ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ :–**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಒಕ್ಕೂಟದ ಮೂರು ಜಿಲ್ಲೆಗಳಿಗೆ ಹಾಲು ಮತ್ತು ಹಾಲಿನ ಉತ್ಪನ್ನ ವಿತರಣೆ ಮಾಡಲು ವಿವಿಧ ಸಾಮರ್ಥ್ಯದ ವಾಹನಗಳನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (ಟೆಕ್ನಿಕಲ್/ಕಮರ್ಷಿಯಲ್) ದರ ಹೊಂದಿದ ಪ್ರತ್ಯೇಕ ಟೆಂಡರ್ ಕರೆಯಲಾಗಿದ್ದು, ವಾಹನಗಳನ್ನು ಹೊಂದಿರುವ ಮಾಲೀಕರು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

**https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **ದಿನಾಂಕ: 22.08.2016 ರಿಂದ** |
| 2 | **ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ** | **ದಿನಾಂಕ: 23.09.2016 ರಂದು ಸಂಜೆ: 17.30 ಗಂಟೆಯವರೆಗೆ** |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | ದಿನಾಂಕ: **26.09.2016** ರಂದು ಬೆಳಿಗ್ಗೆ: **11.30** ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | ದಿನಾಂಕ: **29.09.2016** ರಂದು ಬೆಳಿಗ್ಗೆ: **11.30** ಗಂಟೆಗೆ |

**2. ಈ ಕೆಳಗೆ ನಮೂದಿಸಿರುವ ಹಾಲು ವಿತರಣಾ ಮಾರ್ಗಗಳಿಗೆ ಹಾಲು/ಉತ್ಪನ್ನಗಳನ್ನು ವಿತರಿಸಲು Insulation ಕವಚವನ್ನು ಹೊಂದಿದ ಬಾಡಿಯುಳ್ಳ ವಿವಿಧ ಸಾಮರ್ಥ್ಯದ 2006 ನೇ ಸಾಲಿನ ಅಥವಾ ನಂತರದ ಸಾಲಿನ ಮಾದರಿಯ ವಾಹನ ಒದಗಿಸಲು 02 ವರ್ಷದ ಅವಧಿಯ ಗುತ್ತಿಗೆಗೆ ಟೆಂಡರ್ ಕರೆಯಲಾಗಿದೆ. ಪ್ರತಿ ಕಿ.ಮೀ. ದರ ನಮೂದಿಸುವುದು. (ಹಾಲು ವಿತರಣಾ ವಾಹನಕ್ಕೆ Insulation ಕವಚವನ್ನು ಎನ್.ಡಿ.ಡಿ.ಬಿ ಸ್ಪೆಸಿಫಿಕೇಶನ್ ಪ್ರಕಾರ ನಿರ್ಮಿಸಿಕೊಳ್ಳಬೇಕು) SMU/MKT/TENDER/2016-17/1/003**

| ಮಾರ್ಗದ ಸಂಖ್ಯೆ | ಹಾಲು ವಿತರಣಾ ಮಾರ್ಗದ ಹೆಸರು/ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ವಿತರಣೆ | ವಾಹನ ಸಾಮರ್ಥ್ಯ (ಕ್ರೇಟುಗಳಲ್ಲಿ) | ದಿನದ ಅಂದಾಜು ಅಂತರ ಕಿ.ಮೀ | ಇ.ಎಂ.ಡಿ ರೂ.ಗಳಲ್ಲಿ | ಭದ್ರತಾ ಠೇವಣಿ ರೂ.ಗಳಲ್ಲಿ |
|---|---|---|---|---|---|
| 1 | **ಹಿರಿಯೂರು ಮಾರ್ಗ:–** ಶಿವಮೊಗ್ಗ ಡೈರಿಯಿಂದ ಭದ್ರಾವತಿ, ಚನ್ನಗಿರಿ, ಹೊಳಲ್ಕೆರೆ–ಹೊಸದುರ್ಗ ಹಾಗೂ ಹಿರಿಯೂರು ಪಟ್ಟಣ ಇತರೆ ಗ್ರಾಮೀಣ ಪ್ರದೇಶಗಳಿಗೆ ಹಾಲು ಮತ್ತು ಹಾಲು ಉತ್ಪನ್ನಗಳನ್ನು ವಿತರಣೆ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ಒಕ್ಕೂಟಕ್ಕೆ ಜಮಾ ಮಾಡುವುದು. | 600 ಕ್ರೇಟು | 338 ಕಿ.ಮೀ | 25,000/– | 2,50,000/– |
| 2 | **ನಾಯಕನಹಟ್ಟಿ–ರಾಂಪುರ ಮಾರ್ಗ:–** ಚಳ್ಳಕೆರೆ ಮಾರ್ಗದ ವಾಹನದಿಂದ ನಾಯಕನಹಟ್ಟಿಯಲ್ಲಿ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆದು ನಾಯಕನಹಟ್ಟಿ, ಮೊಳಕಾಲ್ಮೂರು ಮತ್ತು ರಾಂಪುರ ಹಾಗೂ ಕೆಲವು ಗ್ರಾಮಾಂತರ ಪ್ರದೇಶದ ಡೀಲರ್‌ಗಳಿಗೆ ವಿತರಣೆ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ಚಳ್ಳಕೆರೆ ಮಾರ್ಗದಲ್ಲಿ ಪಾವತಿಸುವುದು. | 250 ಕ್ರೇಟು | 170 ಕಿ.ಮೀ | 25,000/- | 2,00,000/- |
| 3 | **ಚಿತ್ರದುರ್ಗ ಡೇ–ಕೌಂಟರ್–1 :–** ಚಿತ್ರದುರ್ಗ ನಗರದಲ್ಲಿ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆದು ಡೇ ಕೌಂಟರ್ ಅಂಗಡಿಗಳು ಹಾಗೂ ಡೀಲರ್‌ಗಳಿಗೆ ವಿತರಣೆ ಮಾಡಿ ನಗದನ್ನು ಒಕ್ಕೂಟಕ್ಕೆ ಜಮಾ ಮಾಡುವುದು. | ಟಾಟಾ ಏಸ್ | 70 ಕಿ.ಮೀ | 25,000/- | 1,00,000/- |

| | | | | | |
|---|---|---|---|---|---|
| 4 | **ಚಿತ್ರದುರ್ಗ ಡೇ–ಕೌಂಟರ್–2:–** ಚಿತ್ರದುರ್ಗ ನಗರದಲ್ಲಿ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆದು ಡೇ ಕೌಂಟರ್ ಅಂಗಡಿಗಳು ಹಾಗೂ ಡೀಲರ್‌ಗಳಿಗೆ ವಿತರಣೆ ಮಾಡಿ ನಗದನ್ನು ಒಕ್ಕೂಟಕ್ಕೆ ಜಮಾ ಮಾಡುವುದು. | ಟಾಟಾ ಏಸ್ | 90 ಕಿ.ಮೀ | 25,000/- | 1,00,000/- |
| 5 | **ಶಿವಮೊಗ್ಗ ಮೊಬೈಲ್ ಸೇಲ್ಸ್ :–** ಶಿವಮೊಗ್ಗ ಡೈರಿಯಿಂದ ನಂದಿನಿ ಉತ್ಪನ್ನಗಳನ್ನು ಪಡೆದು ಶಿವಮೊಗ್ಗ, ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳ ಗ್ರಾಮಾಂತರ ಪ್ರದೇಶಗಳಲ್ಲಿ ಮಾರಾಟ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ಒಕ್ಕೂಟಕ್ಕೆ ಜಮಾ ಮಾಡುವುದು. | ಟಾಟಾ ಏಸ್ | ಮಾಸಿಕ 3000 ಕಿ.ಮೀ | 25,000/- | 1,50,000/- |
| 6 | **ದಾವಣಗೆರೆ ಡೇ–ಕೌಂಟರ್ (ಡಿಸಿಎಂ) ಮಾರ್ಗ:–** ದಾವಣಗೆರೆ ಡೈರಿಯಿಂದ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆದು ದಾವಣಗೆರೆ ನಗರ ಹಾಗೂ ಇತರೆ ಗ್ರಾಮಾಂತರ ಪ್ರದೇಶದಲ್ಲಿ ಹಾಲು ವಿತರಣೆ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ಒಕ್ಕೂಟಕ್ಕೆ ಜಮಾ ಮಾಡುವುದು. | ಟಾಟಾ ಏಸ್ | 38 ಕಿ.ಮೀ | 25,000/- | 1,00,000/- |

**ನಿಬಂಧನೆ ಮತ್ತು ಷರತ್ತುಗಳು :–**

1. ಟೆಂಡರ್ ಸಲ್ಲಿಸ ಬಯಸುವವರು ತಮ್ಮ ಹೆಸರಿಗೆ ಕಡ್ಡಾಯವಾಗಿ ವಾಹನವನ್ನು ಹೊಂದಿರತಕ್ಕದ್ದು. ವಾಹನ ಹೊಂದಿಲ್ಲದವರು ಟೆಂಡರ್‌ನಲ್ಲಿ ದರ ಒಪ್ಪಿಗೆಯಾದಲ್ಲಿ ಟೆಂಡರ್ ದರ ಒಪ್ಪಿಗೆ ಆದೇಶ ನೀಡಿದ 30 ದಿನಗಳೊಳಗಾಗಿ ಟೆಂಡರ್‌ನಲ್ಲಿ ಪ್ರಕಟಿಸಿದ ಮಾದರಿಯ/ಸಾಮರ್ಥ್ಯದ ವಾಹನವನ್ನು ಖರೀದಿಸಿ ನೀಡುವುದು. ತಪ್ಪಿದ್ದಲ್ಲಿ ಟೆಂಡರ್ ನಿಯಮಾನುಸಾರ ಇ.ಎಂ.ಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
2. ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.
3. ಕನಿಷ್ಠ ಇ.ಎಂ.ಡಿ. ರೂ. 25,000/– ಆದರೆ ವಿತರಣಾ ಮಾರ್ಗದ ವಾಹನಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಬಾಬ್ತು ಡಿ.ಡಿ.ಯನ್ನು ಇ–ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.
4. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲು ವಿತರಣೆ ವಾಹನಕ್ಕೆ ಹಾಗೂ ಕಾರುಗಳಿಗೆ ರಾಜ್ಯ/ರಾಷ್ಟ್ರಿಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದ ವತಿಯಿಂದ ನೀಡಲಾಗುವುದಿಲ್ಲ ಮತ್ತು ಸೇವಾ ತೆರಿಗೆಯನ್ನು ಗುತ್ತಿಗೆದಾರರೆ ಭರಿಸಬೇಕಾಗಿರುತ್ತದೆ.
5. ಹಾಲು ವಿತರಣಾ ವಾಹನಗಳು 2006 ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು. ಹಳದಿ ಬೋರ್ಡ್ ಹೊಂದಿದ್ದು ವಾಹನ ಚಾಲಕರು ಚಾಲನಾ ಪರವಾನಗಿ ಹಾಗೂ ಬ್ಯಾಡ್ಜ್ ಹೊಂದಿರತಕ್ಕದ್ದು.
6. ಹಾಲು ವಿತರಣಾ ಮಾರ್ಗದ ವಾಹನಗಳ ಪಥವನ್ನು ಕಛೇರಿಗೆ ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು. ಈ ಸಂದರ್ಭದಲ್ಲಿ ಕಿ.ಮೀ. ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ. 10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಪ್ರೋರೆಟಾ ಆಧಾರದಲ್ಲಿ ದರವನ್ನು ಕಡಿಮೆ ಅಥವಾ ಹೆಚ್ಚು ಮಾಡಲಾಗುವುದು.
7. ಗುತ್ತಿಗೆದಾರರ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಮಾರ್ಗಗಳ ಪುನರ್ ವಿಂಗಡಣೆ ಮತ್ತು ಮಾರ್ಗಗಳ ಗುತ್ತಿಗೆ ರದ್ದುಮಾಡುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು/ ಟೆಂಡರ್‌ದಾರರು ಬದ್ಧವಾಗಿರಬೇಕು.
8. ಷಟಲ್ ಮಾರ್ಗದ ಗುತ್ತಿಗೆದಾರರು ಮುಖ್ಯ ಮಾರ್ಗದಿಂದ ಪಡೆದ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೊತ್ತ, ಖಾಲಿ ಕ್ರೇಟ್‌ಗಳನ್ನು, ಕ್ಯಾನ್‌ಗಳನ್ನು ನಿಗದಿತ ಸ್ಥಳ ಮತ್ತು ಸಮಯದಲ್ಲಿ ಪಡೆಯುವುದು ಮತ್ತು ನೀಡುವುದು.
9. ಹಾಲು ವಿತರಣಾ ಮಾರ್ಗದ ಗುತ್ತಿಗೆದಾರರು ಹಾಲು ಮತ್ತು ಹಾಲಿನ ಉತ್ಪನ್ನಗಳ ಒಟ್ಟು ಮೊತ್ತವನ್ನು ಆಯಾ ದಿನವೇ ನಿಗಧಿತ ವೇಳೆಗೆ ಕಚೇರಿ/ಬ್ಯಾಂಕಿಗೆ ಪಾವತಿಸುವುದು. ಪೂರ್ಣ ಮೊತ್ತ ಪಾವತಿಸದೇ ಬಾಕಿ ಉಳಿಸಿಕೊಂಡಲ್ಲಿ ಮೊದಲ ದಿನ ಹಾಗೂ 2 ನೇ ದಿನದ ಬಾಕಿ ಮೊತ್ತಕ್ಕೆ ಶೇ 2% ರಷ್ಟು ದಂಡದ ಮೊತ್ತವನ್ನು 3 ನೇ ದಿನಕ್ಕೆ ಪಾವತಿಸುವುದು. 3 ನೇ ದಿನವೂ ಬಾಕಿ ಉಳಿಸಿಕೊಂಡಲ್ಲಿ ದಿನದ ಬಾಕಿ ಮೊತ್ತಕ್ಕೆ ಶೇ 3% ರಷ್ಟು ಬಡ್ಡಿ ಸೇರಿಸಿ ಪಾವತಿಸತಕ್ಕದ್ದು ಮತ್ತು ನಂತರವೂ ಪಾವತಿಸದಿದ್ದಲ್ಲಿ ಒಕ್ಕೂಟದ ನಿಯಮಾನುಸಾರ ಗುತ್ತಿಗೆ ರದ್ದುಪಡಿಸಲು ಕ್ರಮವಿಡಲಾಗುವುದು.

10. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ (ಚಾಲಕರು/ಕಂಡಕ್ಟರ್) ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

**ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಮಾರುಕಟ್ಟೆ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ – www.shimul.coop ಸಂಪರ್ಕಿಸಬಹುದು.**

**ಸಹಿ/–**

**ವ್ಯವಸ್ಥಾಪಕ ನಿರ್ದೇಶಕರು**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ

ಜಿಲ್ಲಾ ಸಹಕಾರ ಹಾಲು ಒಕ್ಕೂಟ

ದಿನಾಂಕ : 17.08.2016

ಸ್ಥಳ : ಮಾಚೇನಹಳ್ಳಿ